D-72 (50)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನಿಯಮ 72ರ ಅಡಿಯಲ್ಲಿ ಗಮನಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ

*****

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಪ್ರಾರಂಭಿಸಲಿರುವ ಪಶುವೈದ್ಯಕೀಯ ಕಾಲೇಜಿನ ಕಾಮಗಾರಿಯು ಪ್ರಾರಂಭಗೊಂಡು ಎರಡು ವರ್ಷ ಕಳೆದರೂ ಇನ್ನೂ ಪ್ರಾರಂಭವಾಗದೆ ಇರುವ ಬಗ್ಗೆ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವ ಬಗ್ಗೆ.

ಉತ್ತರ: ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ್ ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ, ಆದೇಶ ಸಂಖ್ಯೆ: ಪಸಂಮಿ/115/ಪಅಸೇ/2012, ದಿನಾಂಕ: 07.02.2012ರ ಪ್ರಕಾರ ಮಹಾವಿದ್ಯಾಲಯದ ಪ್ರಥಮ ಹಂತದ ಕಾಮಗಾರಿಗೆ ರೂ. 142.00 ಕೋಟಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಯು M/s Star Builders & Developers, Hassan ಇವರಿಗೆ ದಿನಾಂಕ: 27.05.2016 ರಂದು Work order ನೀಡಲಾಗಿದ್ದು, ದಿನಾಂಕ: 31.12.2019 ಕ್ಕೆ ಕಾಮಗಾರಿಯನ್ನು ಮುಕ್ತಾಯಗೊಳಿಸಬೇಕಾಗಿರುತ್ತದೆ.

ಆದರೆ, ಸರ್ಕಾರದ ಅನುದಾನ ಲಭ್ಯತೆ ಆಧರಿಸಿ, ಕಾಮಗಾರಿ ಮುಕ್ತಾಯ ಅವಧಿಯನ್ನು ದಿನಾಂಕ: 31.12.2021 ರವರೆಗೆ ವಿಸ್ತರಿಸಲಾಗಿದೆ. ಈವರೆಗೆ ಸದರಿ ಅನುದಾನದ ಪೈಕಿ ಈಗಾಗಲೇ ರೂ. 65.00 ಕೋಟಿ ಅನುದಾನವು ಬಿಡುಗಡೆಯಾಗಿ ಪಶುವೈದ್ಯಕೀಯ ಮಹಾವಿದ್ಯಾಲಯದ ಮುಖ್ಯ ಕಟ್ಟಡ, ವಿದ್ಯಾರ್ಥಿಗಳ ವಸತಿ ನಿಲಯ ಹಾಗೂ ಜಾನುವಾರುಗಳ ಚಿಕಿತ್ಸಾ ಸಂಕೀರ್ಣಗಳ ಕಾಮಗಾರಿಗಳ ಕಟ್ಟಡಗಳು ಶೇಕಡ 66 ರಷ್ಟು ಪ್ರಗತಿಯಲ್ಲಿರುತ್ತವೆ. ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ. 77 ಕೋಟಿ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಮುಂದುವರೆದು, ಎರಡನೇ ಹಂತದ ಕಾಮಗಾರಿಗಳಾದ ಜಾನುವಾರುಗಳ ಫಾರಂಗಳು, ಕ್ರೀಡಾ ಸಂಕೀರ್ಣ, ವಸತಿ ಗೃಹ ಮತ್ತು ರಸ್ತೆಗಳ ಕಾಮಗಾರಿಗಳು ಹಾಗೂ ಉಪಕರಣಗಳ ಖರೀದಿಯನ್ನು ರೂ. 201.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಬೇಕಾಗಿರುತ್ತದೆ.

**ಸಂಖ್ಯೆ: ಪಸಂಮೀ ಇ-106 ಸಲೆವಿ 2020**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು**